

# ಟೋನಿ ಬೂಯಿ

ನಿರ್ದೇಶಕ ಹುಟ್ಟಿದ್ದು 1973ರಲ್ಲಿ ವಿಯೆಟ್ನಾಮ್‌ನಲ್ಲಿ. ಅವನಿಗೆ ಎರಡು ವರ್ಷದ ಹುಡುಗನಾಗಿದ್ದಾಗಲೇ ಅಮೆರಿಕ– ವಿಯೆಟ್ನಾಂ ಯುದ್ಧದ ನಿರಾಶ್ರಿತರಾಗಿ ಅವರ ಕುಟುಂಬ ಸಮೇತ ಅಮೆರಿಕಕ್ಕೆ ವಲಸೆ ಹೋಗುತ್ತದೆ. ಜೀವನ ನಿರ್ವಹಣೆಗಾಗಿ ಬೂಯಿ ತಂದೆ ಕ್ಯಾಲಿಫೋರ್ನಿಯಾದಲ್ಲಿ ಸಿ.ಡಿ. ಅಂಗಡಿ ನಡೆಸುತ್ತಿದ್ದರು. ಅವರಲ್ಲಿ ಸಿನಿಮಾಪ್ರೀತಿ ಮೊಳೆಯಲೂ ಅದೇ ಕಾರಣವಾಯ್ತು. ಲಾಸ್ ಏಂಜಲೀಸ್‌ನ ಲೊಯೆಲೊ ಮ್ಯಾರಿಮೌಂಟ್ ವಿಶ್ವವಿದ್ಯಾಲಯದಲ್ಲಿ ಸಿನಿಮಾ ನಿರ್ಮಾಣದ ಪಾಠಗಳನ್ನು ಕಲಿತ ಅವನು ಮೊಟ್ಟ ಮೊದಲಿಗೆ 'ಯೆಲ್ಲೋ ಲೊಟಸ್' ಎಂಬ ಕಿರುಚಿತ್ರವನ್ನೂ ಮಾಡಿದ. 1999ರಲ್ಲಿ ನಿರ್ಮಾಣಗೊಂಡ 'ಥ್ರೀ ಸೀಸನ್ಸ್' ಮೂಲಕ ಜಾಗತಿಕವಾಗಿ ಪ್ರಸಿದ್ಧಿಗೆ ಬಂದ. ಸನ್ ಡಾನ್ಸ್ ಫಿಲಂ ಫೆಸ್ಟಿವಲ್‌ನಲ್ಲಿ ಆಡಿಯನ್ಸ್ ಅವಾರ್ಡ್ ಮತ್ತು ಗ್ರ್ಯಾಂಡ್ ಜ್ಯೂರಿ ಅವಾರ್ಡ್ ಎರಡನ್ನೂ ಪಡೆದುಕೊಂಡಿರುವ ಏಕೈಕ ಸಿನಿಮಾ ಇದು. ಅಷ್ಟೇ ಅಲ್ಲದೆ ಹಲವು ಅಂತರರಾಷ್ಟ್ರೀಯ ಸಿನಿಮಾಗಳಲ್ಲಿ ಪ್ರದರ್ಶನಕಂಡು ಪ್ರಶಸ್ತಿಗಳನ್ನೂ ಬಾಚಿಕೊಂಡಿದೆ. ಈ ಚಿತ್ರದಲ್ಲಿ ಬೂಯಿ ವಿಯೆಟ್ನಾಂನಲ್ಲಿ ಬದಲಾಗುತ್ತಿರುವ ಜೀವನವಿಧಾನ, ಅದರ ಪರಿಣಾಮಗಳನ್ನು ತಾನೇ ಕಂಡುಂಡಂತೆ ಚಿತ್ರಿಸಿದ್ದಾನೆ. ಇವನು ಸ್ವತಃ ಹೆಚ್ಚು ಸಿನಿಮಾಗಳನ್ನು ನಿರ್ದೇಶಿಸಿಲ್ಲ. ಆದರೆ ತನ್ನ ಸಹೋದರ ಟಿಮೋಥಿ ಲಿನ್ಹು ಬೂಯಿ ಜತೆ ಹಲವು ಸಿನಿಮಾಗಳಲ್ಲಿ ಕೆಲಸ ಮಾಡಿದ್ದಾನೆ.

'ನಿಮ್ಮ ಜತೆ ಒಂದು ಸಂಜೆ ಕಳೆಯಲು.'

'ಐವತ್ತು ಡಾಲರ್. ಆದರೆ ನಾನೇನೂ ಇಡೀ ರಾತ್ರಿ ಗಿರಾಕಿಯ ಜತೆಗಿರುವುದಿಲ್ಲ. ಅದು ನಿನಗೂ ಗೊತ್ತು. ಯಾಕಿದನ್ನು ಕೇಳ್ತಿದ್ದೀಯಾ? ಯಾವ್ದಾದ್ರೂ ಗಿರಾಕಿ ಗೊತ್ತಿದ್ದಾರಾ?'

'ಇಲ್ಲ ಇಲ್ಲ... ಸುಮ್ನೆ ಕುತೂಹಲಕ್ಕೆ ಕೇಳಿದೆ ಅಷ್ಟೆ.'

'ನಾನು ಯಾವಾಗಲೂ ಇದೇ ಕೆಲಸ ಮಾಡುತ್ತಿರುತ್ತೇನೆ ಅಂದ್ಕೋಬೇಡ. ಮುಂದೆ ಯಾವ ರೀತಿ ಬದುಕಬೇಕು ಎನ್ನುವುದಕ್ಕೆ ನಾನು ಪ್ಲ್ಯಾನ್ ಮಾಡ್ಕೊಂಡಿದ್ದೀನಿ ಗೊತ್ತಾ?'

'ಹಣ ಮಾಡಲಿಕ್ಕೆ ಇದನ್ನು ಬಿಟ್ಟು ಬೇರೆ ದಾರಿಗಳೂ ಇದ್ದಾವಲ್ವಾ?'

'ಯಾವ ದಾರಿ? ನನ್ನಮ್ಮ ಬದುಕಿದಳಲ್ವಾ? ಆ ದಾರಿನಾ? ಕುಟುಂಬಕ್ಕಾಗಿ ಬೆನ್ನುಮೂಳೆ ಸವೆದುಹೋಗುವ ಹಾಗೆ ದುಡಿದು ದುಡಿದು ಸತ್ತಳು. ಕೊನೆಗೂ ಅವಳಿಗೆ ಏನಂದ್ರೆ ಏನೂ ಸಿಗಲಿಲ್ಲ. ಅವಳಿಗೆ ಬಂದ ಪರಿಸ್ಥಿತಿ ನನ್ನ ಬದುಕಿನಲ್ಲಿ ಬರಲಿಕ್ಕೆ ನಾನೆಂದಿಗೂ ಬಿಡುವುದಿಲ್ಲ.'

(ಮತ್ತೆ ದಿಗ್ಗನೇ ಆವರಿಸಿಕೊಳ್ಳುವ ಮೌನ... ಈ ಸಲ ಲ್ಯಾನ್ ತಾನೇ ಮುಂದಾಗಿ ಮಾತಾಡುವಳು)